ಡಾ. ಹೆಚ್.ಸಿ. ಮಹದೇವಪ್ಪ: ಒಂದು ವೇಳೆ ಆ ರೀತಿಯಾಗಿ ನಮ್ಮ ಅಧಿಕಾರಿಗಳು ಏನಾದರೂ ತಪ್ಪು ಮಾಡಿದ್ದರೆ, ಆ ಕುರಿತು ತಮ್ಮಲ್ಲಿರುವ ವಿವರಗಳನ್ನು ಕೊಡಿ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಒಂದೇ ಬೋರ್‌ವೆಲ್‌ಗಾಗಿ ಮೂರು ಕಡೆ ಹಣವನ್ನು ಡ್ರಾ ಮಾಡಿರುವ ಸಾಧ್ಯತೆಯಿದೆ, ಅಥವಾ ಬೋರ್ ವೆಲ್ ಅನ್ನು ಕದ್ದುಕೊಂಡು ಹೋಗಿರಬಹುದು.

ಡಾ. ಹೆಚ್.ಸಿ. ಮಹದೇವಪ್ಪ: ಮಾನ್ಯ ಸದಸ್ಯರ ಬಳಿ ಆ ರೀತಿಯ ಮಾಹಿತಿ ಇದ್ದರೆ ನಮಗೆ ನೀಡಲಿ ಅಥವಾ ನಮಗೆ ತಿಳಿಸಿದರೂ ಸಹ ನಾವು ಅದನ್ನು ವೆರಿಫೈ ಮಾಡಿ ಅವರ ವಿರುದ್ಧ ಸರಿಯಾದ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ: 3682
ವಿಧಾನ ಸಭಾ ಸದಸ್ಯರು : ಶ್ರೀ ಆರ್. ಧ್ರುವನಾರಾಯಣ
ಉತ್ತರಿಸುವವರು : ಎನ್. ಚೆಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ	ಉತ್ತರ
1. ಸಂತೇಮರಹಳ್ಳಿ ಕ್ಷೇತ್ರದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಹಾಗೂ ಶುಶ್ರೂಷಕಿಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಸಂತೇಮರಹಳ್ಳಿ ಕ್ಷೇತ್ರದಲ್ಲಿನ ಪ್ರಾತಮಿಕ ಆರೋಗ್ಯ ಕೇಂದ್ರಗಳಲ್ಲಿ 9 ವೈದ್ಯರ ಹುದ್ದೆ ಮಂಜೂರಾಗಿದ್ದು, 8 ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದು, ಒಂದು ವೈದ್ಯರ ಹುದ್ದೆ ಖಾಲಿ ಇರುತ್ತದೆ ಹಾಗು ಶುಶ್ರೂಷಕಿಯರ 3 ಹುದ್ದೆಗಳೂ ಮಂಜೂರಾಗಿದ್ದು, ಎಲ್ಲಾ ಹುದ್ದೆಗಳು ಭರ್ತಿಯಾಗಿವೆ.
2. ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು?	ಖಾಲಿ ಇರುವ ಒಂದು ವೈದಯಾಧಿಕರಿಯ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

ಶ್ರೀ ಆರ್. ಧ್ರುವನಾರಾಯಣ: ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ, ಮೊದಲಿಗೆ ಅವರನ್ನು ಅಭಿನಂದಿಸುತ್ತೇನೆ, ಏಕೆಂದರೆ, ಚಾಮರಾಜನಗರ ಎಂದರೆ ಯಾವ ಮಂತ್ರಿಗಳು ಸಹ ಬರುವುದಿಲ್ಲ, ನಮ್ಮ ಜಿಲ್ಲೆಗೆ ಬರಲಿಕ್ಕೆ ಹೆದರುತ್ತಾರೆ. ಹಾಗಿರುವಾಗ ಪ್ರಪ್ರಥಮವಾಗಿ ಒಬ್ಬ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಾಗ, ನಮ್ಮ ತಾಲೂಕು ಹಾಗೂ ಜಿಲ್ಲೆಯಲ್ಲಿರುವ ಸಮಸ್ಯೆಗಳನ್ನು ಅವರಿಗೆ ತಿಳಿಸಿದ್ದೇವೆ. ನನ್ನ ಕ್ಷೇತ್ರದಲ್ಲಿ ಸುಮಾರು 9 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ, ಅದರಲ್ಲಿ ಎರಡು ಕೇಂದ್ರಗಳಲ್ಲಿ ಡಾಕ್ಟರ್‌ಗಳು ಇಲ್ಲ. ಅವು ಯಾವುವೆಂದರೆ, ಬುಡಕಟ್ಟು ಜನಾಂಗ ವಾಸಿಸುವಂತಹ ಕೇಂದ್ರಗಳಲ್ಲಿ ಡಾಕ್ಟರ್ ಗಳು ಇಲ್ಲ, ಕೋಳಿಪಾಳ್ಯವೆಂಬ ಜಾಗದಲ್ಲಿ ಬುಡಕಟ್ಟು ಜನಾಂಗ ವಾಸವಾಗಿದ್ದಾರೆ, ಆ ಜಾಗವನ್ನು ಸಂಪೂರ್ಣವಾಗಿ ವೀರಪ್ಪನ್ ಪಹರೆಯನ್ನಾಗಿ ಮಾಡಿಕೊಂಡಿದ್ದನು. ಅಲ್ಲಿ ಸೋಲಿಗರು ಎಂಬ ಬುಡಕಟ್ಟು ಜನಾಂಗ ವಾಸಿಸುವಂತಹ ಸ್ಥಳವಾಗಿದೆ, ಅಂತಹ ಸ್ಥಳದಲ್ಲಿ ಡಾಕ್ಟರ್ ಇಲ್ಲ, ಮತ್ತೊಂದು ಕುದೇರು ಎಂಬ ಸ್ಥಳದಲ್ಲಿ ಕೂಡ ಡಾಕ್ಟರ್ ಇಲ್ಲ. ನಮ್ಮಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಾಕಷ್ಟು ಸಿಬ್ಬಂದಿಗಳ ಕೊರತೆಯಿದೆ, ಕೂಡಲೇ ಆ ಕೇಂದ್ರಗಳಲ್ಲಿ ಸಿಬ್ಬಂದಿಗಳನ್ನು ಭರ್ತಿಮಾಡಬೇಕಾಗಿ ವಿನಂತಿಸುತ್ತೇನೆ. ನಮ್ಮ ಚಾಮರಾಜನಗರ ತಾಲೂಕು ಆಸ್ಪತ್ರೆಯನ್ನು ಜಿಲ್ಲಾ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸಿರುವುದರಿಂದ ಮಾನ್ಯ ಸಚಿವರನ್ನು ನಾನು ಅಭಿನಂದಿಸುತ್ತೇವೆ. ನಮ್ಮ ಪಿ.ಹೆಚ್.ಸಿ.ಗಳಲ್ಲಿ ಡಾಕ್ಟರ್ಸ್ ಕ್ವಾರ್ಟರ್ಸ್ ಇದ್ದರೂ ಸಹ ಅಲ್ಲಿ ಯಾರು ಸಹ ನೈಟ್ ಹಾಲ್ಟ್ ಮಾಡುವುದಿಲ್ಲ, ಹಾಗಾಗಿ ಆ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವಂತಹ ರೈತಾಪಿ ಜನ, ಬಡವರಿಗೆ ಇದರಿಂದ ಬಹಳ ತೊಂದರೆಯಾಗಿದೆ. ಸರ್ಕಾರ ಡಾಕ್ಟರ್‌ಗಳಿಗೆ Compulsory ನೈಟ್ ಹಾಲ್ಟ್ ಮಾಡಲು ಆದೇಶವನ್ನು ಹೊರಡಿಸಬೇಕು ಹಾಗೂ ಈಗ ಖಾಲಿಯಿರುವ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎನ್. ಚೆಲುವರಾಯಸ್ವಾಮಿ: ಮಾನ್ಯ ಉಪಾಧ್ಯಕ್ಷರೇ, ಚಾಮರಾಜನಗರದಲ್ಲಿ ನಾನೇ ಖುದ್ದಾಗಿ ಹೋಗಿ, ಅಲ್ಲಿನ ಎಲ್ಲಾ ಸಮಸ್ಯೆಯ ಬಗ್ಗೆ ನಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಬಹುಶಃ ಇವರ ಕ್ಷೇತ್ರದಲ್ಲಿ 9 ಡಾಕ್ಟರುಗಳಲ್ಲಿ ಒಂದು ಖಾಲಿ ಇದೆ. ಬೇರೆಯವರಿಗೆ ಹೋಲಿಕೆ ಮಾಡಿದರೆ, ಬಹುಶಃ ಸ್ವಲ್ಪ ಉತ್ತಮವಾಗಿದೆ ಎಂದು ಹೇಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ: ನನ್ನ ಕ್ಷೇತ್ರವೇ ಇದೆಯಲ್ಲ.

ಶ್ರೀ ಎನ್. ಚೆಲುವರಾಯಸ್ವಾಮಿ: ನಮ್ಮ ವಿರೋಧ ಪಕ್ಷದ ನಾಯಕರ ಕ್ಷೇತ್ರವನ್ನೇ ನಾನು ಉದಾಹರಣೆ ಕೊಟ್ಟಿದ್ದೇನೆ. ಆದರೆ, ಈ ವಿಷಯವನ್ನು ಸದನದಲ್ಲಿ ಹೇಳುವುದು

ಬೇಡ ಎಂದು ಹೇಳಲಿಲ್ಲ. ಏಕೆಂದರೆ, ಅವರ ಕ್ಷೇತ್ರಕ್ಕೆ ಹೋಲಿಕೆ ಮಾಡಿದಾಗ ಬಹಳ ಚೆನ್ನಾಗಿದೆ. ಚಾಮರಾಜನಗರಕ್ಕೆ ಯಾವ ಮಂತ್ರಿಗಳೂ ಬರುವುದಿಲ್ಲ, ಅವರಿಗೆ ಬಹಳ ಕಷ್ಟ ಎಂದು ಅವರು ಹೇಳಿದರು.

ಶ್ರೀ ವಾಟಾಳ್ ನಾಗರಾಜ್: ನೀವುಗಳು ಬಂದರೆ ಏನೂ ಆಗುವುದಿಲ್ಲ. ಮುಖ್ಯಮಂತ್ರಿಗಳು ಬಂದರೆ ಎಂದು ಇರುವುದು. ನೀವು ಮೂರು ಸಾರಿ ಬಂದರೂ, ನಿಮಗೆ ಏನೂ ಆಗುವುದಿಲ್ಲ. ಎಲ್ಲರೂ ಒಟ್ಟೊಟ್ಟಿಗೆ ಮಂತ್ರಿಗಳು ಬಂದರೂ ಏನೂ ಆಗುವುದಿಲ್ಲ. ಇವರುಗಳಿಗೂ ಎನೂ ಆಗುವುದಿಲ್ಲ. ಆದರೆ, ಮುಖ್ಯಮಂತ್ರಿ ಬಂದರೆ ಆಗುತ್ತೆ ಎಂದು ಒಂದು ಕೆಟ್ಟ ಮೂಢನಂಬಿಕೆ ಇದೆ, ಇದು ಹೋಗಲೇಬೇಕು. ಇದು ಹೋಗಲಿಲ್ಲವೆಂದರೆ, ನಿಜಕ್ಕೂ ಇದು ಅತ್ಯಂತ ಅಪರಾಧ. ಯಾವ ದೇಶ, ಯಾವರಾಜ್ಯ, ಎಲ್ಲಿಂದ ಎಲ್ಲಿಗೆ ಬೇಕಾದರೂ ಹೋಗಬಹುದು. ಅದರಲ್ಲೂ ಚಾಮರಾಜನಗರ ಜಿಲ್ಲೆ ಬಹಳ ಪವಿತ್ರವಾದ ಜಿಲ್ಲೆ. ನಾವು ಹೋಗುತ್ತೇವೆಂದು ಅವರು ಹೇಳುವುದು ಒಂದು ದೊಡ್ಡ ಸಾಹಸವೇ? ಅಲ್ಲಿ ಬಂದರೆ ಏನಾಗುತ್ತೆ. ಒಂದು ಕಡೆ ಬಿಳಿಗಿರಿ ರಂಗನಬೆಟ್ಟ ಮತ್ತು ಆಶ್ರಮ ಮತ್ತೊಂದು ಕಡೆ ಮಹದೇಶ್ವರ ಸ್ವಾಮಿ. ಆದ್ದರಿಂದ ಯಾರೇನೂ ತಲೆ ಕೆಡಸಿಕೊಳ್ಳಬೇಕಾಗಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ನಾವೇ ಮುಖ್ಯಮಂತ್ರಿಗಳನ್ನು ಕರೆದುಕೊಂಡು ಹೋಗುವುದಕ್ಕೆ ಹಿಂದು-ಮುಂದು ನೋಡುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಚಾಮರಾಜನಗರಕ್ಕೆ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಹೋಗುವುದು, ಬಿಡುವುದು ಎರಡನೇ ಪ್ರಶ್ನೆ. ಮೊದಲು ಈ ಪ್ರಶ್ನೆಗೆ ಅವರು ಉತ್ತರ ಕೊಡಲಿ.

ಶ್ರೀ ಎನ್. ಚೆಲುವರಾಯಸ್ವಾಮಿ: ಮಾನ್ಯ ಸಿದ್ಧರಾಮಯ್ಯನವರು ಮುಖ್ಯ ಮಂತ್ರಿಯಾದರೆ, ಮೊದಲನೇ ದಿವಸವೇ ಚಾಮರಾಜನಗರಕ್ಕೆ ಹೋಗುತ್ತೇನೆಂದು ಹೇಳಿದ್ದಾರೆ. ಅದರಿಂದ ಈ ಆಪಾದನೆ ತಪ್ಪುತ್ತೆ ಬಿಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಚಾಮರಾಜನಗರಕ್ಕೆ ಹೋಗದೇ ಇರುವುದು ಅದಕ್ಕಲ್ಲ, ಇವರ ಕಾಟಕ್ಕೆ ಹೆದರಿಕೊಂಡು ಯಾರೂ ಹೋಗುತ್ತಾ ಇಲ್ಲ.

ಶ್ರೀ ಎನ್. ಚೆಲುವರಾಯಸ್ವಾಮಿ: ಅದನ್ನು ಅವರು ಹೇಳುವುದಿಲ್ಲ...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇವರು ಇರುವವರೆಗೂ ಚಾಮರಾಜನಗರಕ್ಕೆ ಯಾವ ಮುಖ್ಯಮಂತ್ರಿಯೂ ಹೋಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಯಾರು ಈ ಬಾಯಿಗೆ ಸಿಕ್ಕಿಹಾಕಿಕೊಂಡು ನರಳುವವರು, ಎಂದು ನಾವು ಹೋಗುವುದಿಲ್ಲವೆಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್: ನಾನು ಯಾರ್ಯಾರಿಗೂ ಹೆದರಲಿಲ್ಲ. ಇವರಿಬ್ಬರಿಗೆ ಹೆದರಬೇಕಾಗಿದೆ. ಈ ಕಡೆ ಮಾಧುಸ್ವಾಮಿ, ಈ ಕಡೆ ಶ್ರೀರಾಮರೆಡ್ಡಿಯವರು, ಇವರದು ನನಗೆ ಬಹಳ ಕಾಟ. ಇವರು ಮದುವೆ ಆಗಿಲ್ಲ, ಇವರ ಹಣೆಬರಹ ಇವರು ಮದುವೆಯಾಗಿದ್ದಾರೆ, ಇವರದೊಂದು ತರಹ ನಮಗೊಂದು ರೀತಿ ಅಪಾಯ ಸ್ವಾಮಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇವರಿಗೆ ಯಾವ ತರಹವೋ ಕೇಳಿ ಸ್ವಾಮಿ.

ಶ್ರೀ ಎನ್. ಚೆಲುವರಾಯಸ್ವಾಮಿ: ನಮಗಂತೂ ವಾಟಾಳ್ ನಾಗರಾಜರಿಂದ ಯಾವುದೇ ತೊಡಕು ಇಲ್ಲ. ಅವರು ಬಹಳ ಹಿರಿಯ ಸದಸ್ಯರು. ಅವರ ಬಗ್ಗೆ ಗೌರವ ಇದೆ, ವಿಶ್ವಾಸ ಇದೆ, ಪ್ರೀತಿ ಇದೆ. ಅದಕ್ಕೋಸ್ಕರವೇ ಚಾಮರಾಜನಗರಕ್ಕೆ ಹೋಗುವ ವಿಚಾರದಲ್ಲಿ ನಾವು ಹೇಳಿದೆವು. ಯಾರು ಏನು ಹೇಳಿದರೋ ಗೊತ್ತಿಲ್ಲ. ನಮಗೆ ಯಾವ ಆತಂಕವೂ ಇಲ್ಲ, ಯಾವ ತರಹ ಮುಜುಗರವೂ ಇಲ್ಲ. ನಾವು ಹೋಗಿದ್ದೆವು, ಆ ಜಿಲ್ಲೆ ಬಗ್ಗೆ ಸಾಕಷ್ಟು ಮಾಹಿತಿಯನ್ನು ತೆಗೆದುಕೊಂಡು ಬಂದಿದ್ದೇವೆ. ಜಿಲ್ಲಾ ಆಸ್ಪತ್ರೆಯನ್ನು ಇನ್ನೂ ಸಾಕಷ್ಟು ಇಂಪ್ರೂವ್ ಮಾಡಬೇಕಾಗಿರುವುದು ಇದೆ. ಮತ್ತು ಸಂತೇಮರಳ್ಳಿ ಕ್ಷೇತ್ರದ ಧ್ರುವನಾರಾಯಣರವರು ಏನು ಪ್ರಶ್ನೆ ಎತ್ತಿದ್ದಾರೆ, ಬಹುಶಃ ಅಲ್ಲಿ ಹೆಚ್ಚು ಸಮಸ್ಯೆ ಇಲ್ಲ. ಆದರೆ, ಇರತಕ್ಕ ಸಮಸ್ಯೆಗಳನ್ನು ನಾವು ಪರಿಹಾರ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅವರು, ಅವರ ಕ್ಷೇತ್ರಕ್ಕೆ ಸೀಮಿತವಾಗಿ ಕೇಳಿದ್ದಾರೆ. ಇಡೀ ರಾಜ್ಯದ ಆಸ್ಪತ್ರೆಗಳ ಅಭಿವೃದ್ಧಿಯಾಗಬೇಕು ಮತ್ತು ಉಪಯೋಗವಾಗಬೇಕು ಎನ್ನು ದೃಷ್ಟಿಯಿಂದ ವಿಶ್ವಬ್ಯಾಂಕಿನಿಂದ 700–800 ಕೋಟಿ ರೂಪಾಯಿಗಳನ್ನು ತಂದು ಬಿಲ್ಡಿಂಗ್‌ಗಳನ್ನು ಕಟ್ಟಿದೆವು. ನಿಮಗೆ ಶಿಕಾರಿಪುರದ ವಿಚಾರ ಗೊತ್ತಿದೆ. ವಿರೋಧ ಪಕ್ಷದ ನಾಯಕರು ಇರುವಂಥ ಕಡೆ ಒಬ್ಬ ಡಾಕ್ಟರು ಇದ್ದಾನೆ, ಅವನ ಮೇಲೆ ವಿಚಾರಣೆ ನಡೆಯುತ್ತಾ ಇದೆ. ಅವನು ಸಸ್ಪೆಂಡ್ ಆಗಿ, ಆವನನ್ನು ರಿಲೀವ್ ಮಾಡಬೇಕು. ಆದರೆ ಮಾಡುತ್ತಾ ಇಲ್ಲ. ಏಕೆಂದರೆ, ಇನ್ಯಾರೂ ಗತಿ ಇಲ್ಲ. ಆಸ್ಪತ್ರೆಗೆ ಬೀಗ ಹಾಕಬೇಕಾಗುತ್ತೆ ಎಂದು. ಸನ್ಮಾನ್ಯ ಉಪಾಧ್ಯಕ್ಷರೇ, ತಮ್ಮ ಮೂಲಕ ನಾನು ಏಕೆ ಇಲ್ಲಿ ಒತ್ತಾಯ ಮಾಡುತ್ತಿದ್ದೇನೆಂದರೆ, ಇಡೀ ರಾಜ್ಯದಲ್ಲಿ ಇರುವಂಥ ಆಸ್ಪತ್ರೆಗಳಲ್ಲಿ ಒಬ್ಬ ಡಾಕ್ಟರು ಇಲ್ಲದೇ ಇದ್ದರೆ ಎಷ್ಟು ಜನರಿಗೆ ತೊಂದರೆಯಾಗುತ್ತೆ ಎಂಬುದು ತಮಗೆ ಗೊತ್ತಿದೆ. ಒಬ್ಬ ಲೇಡಿ ಡಾಕ್ಟರು ಇರಬಹುದು ಅಥವಾ ಬೇರೆ ಡಾಕ್ಟರು ಇರಬಹುದು. ತಾಲ್ಲೂಕು ಮಟ್ಟದಲ್ಲಿ ಜನರಲ್ ಆಸ್ಪತ್ರೆಗಳಲ್ಲಿ ಯಾರೂ ಇಲ್ಲದೇ ಇದ್ದರೆ, ಆ ಬಡವರ ಗತಿ ಏನು? ಇವತ್ತು ಅವರನ್ನು ಅನಿವಾರ್ಯವಾಗಿ ನರ್ಸಿಂಗ್ ಹೋಮ್‌ಗಳಿಗೆ ಹೋಗತಕ್ಕಂಥ ದುಃಸ್ಥಿತಿಗೆ ನಾವು ತಳ್ಳುತ್ತಿದ್ದೇವೆ. ಇದಕ್ಕೆ ನೀವು

ಏನಾದರೂ ಮಾಡಿ 15 ದಿನದಲ್ಲಿ ಅಥವಾ ಒಂದು ತಿಂಗಳಲ್ಲಿ ವ್ಯವಸ್ಥೆ ಮಾಡಬೇಕು. ಬೇರೆ ರಾಜ್ಯಗಳಲ್ಲಿ ಏನು ಸಂಬಳ ಕೊಡುತ್ತಿದ್ದಾರೆ ಅದಕ್ಕಿಂತ 5 ಸಾವಿರ ಜಾಸ್ತಿ ಕೊಡುತ್ತೇವೆಂದು ಹೇಳಿ. 15 ರಿಂದ 20 ಸಾವಿರ ರೂಪಾಯಿ ಸಂಬಳ ಕೊಡಿ. ನೀವು ಆಸ್ಪತ್ರೆಗಳಿಗೆ ಡಾಕ್ಟರುಗಳನ್ನು ನೇಮಕ ಮಾಡುವುದಿಲ್ಲವೆನ್ನುವುದಾದರೆ, ನಾವು ಜನರಿಗೆ ಮುಖ ತೋರಿಸುವುದು ಹೇಗೆ? ನಾನೊಬ್ಬ ವಿರೋಧ ಪಕ್ಷದ ನಾಯಕ ಎಂದು ಹೇಳಿಕೊಳ್ಳುವುದು ನನ್ನ ಕ್ಷೇತ್ರದಲ್ಲಿಯೇ ಹೀಗೆ. ಎಲ್ಲಾ ಕಡೆ ಪರಿಸ್ಥಿತಿ ಹೇಗಿದೆಯೆಂದರೆ, ಒಂದು ತಿಂಗಳೂ ಅಥವಾ ಹದಿನೈದು ದಿವಸ ನಾವು ಕಾಯಬಹುದು. ಇಡೀ ರಾಜ್ಯದಲ್ಲಿ ಕಳೆದ 10 ತಿಂಗಳಿಂದ ಈ ಪರಿಸ್ಥಿತಿ ಇದೆ. ಇದನ್ನು ನೀವು ಯಾವಾಗ ಸರಿ ಮಾಡುತ್ತೀರಿ? ಈಗಂತು ಅಧಿವೇಶನ ಚರ್ಚೆ, ರಾಜಕಾರಣ ಇದೆಲ್ಲಾ ಮುಗಿದುಹೋಗುತ್ತೆ. ನೀವು ನಾಳೆಯಿಂದಲಾದರೂ ಕುಳಿತು ಚರ್ಚೆ ಮಾಡಿ ಇದಕ್ಕೆ ಏನಾದರೊಂದು ಪರಿಹಾರ ಹುಡುಕುತ್ತೀರಾ?

ಶ್ರೀ ಎ.ವಿ. ಉಮಾಪತಿ (ಹೊಳಲ್ಕೆರೆ):– ಮಾನ್ಯ ಉಪಾಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಎರಡು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಒಂದು ಕೇಂದ್ರದಲ್ಲಿ 7 ಜನ ಡಾಕ್ಟರುಗಳಿಗೆ, 3 ಜನ ಮಾತ್ರ ಇದ್ದಾರೆ. ಇನ್ನೊಂದು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಡಾಕ್ಟರೇ ಇಲ್ಲ. ಹೀಗಾಗಿ, ಹೊಳಲ್ಕೆರೆಯಲ್ಲಿ ಒಬ್ಬ ಡಾಕ್ಟರನ್ನು ಬಹಳ ಕಷ್ಟಪಟ್ಟು ಹಾಕಿಕೊಟ್ಟಿದ್ದೀರಿ. ಇನ್ನೂ ಅಲ್ಲಿ 5 ಜನ ವೈದ್ಯರುಗಳು ಬೇಕಾಗಿದೆ. ಚಿಕ್ಕಜಾಜೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಡಾಕ್ಟರು ಇಲ್ಲದೇ, ಅಲ್ಲಿಯ ಜನಗಳು ದಾವಣಗೆರೆ ಮತ್ತು ಚಿತ್ರದುರ್ಗಕ್ಕೆ ಹೋಗಬೇಕಾದ ಪ್ರಸಂಗ ಬಂದಿದೆ. ಆದ್ದರಿಂದ ದಯಮಾಡಿ ಹೊಳಲ್ಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯರನ್ನು ಅದಷ್ಟು ಜಾಗ್ರತೆ ಹಾಕಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಚೆಲುವರಾಯಸ್ವಾಮಿ: ವೈದ್ಯರುಗಳ ಕೊರತೆ ಇರತಕ್ಕಂಥಾದ್ದು ಸತ್ಯ. ಆದರೆ ಮಾನ್ಯ ಹಿರಿಯ ಸದಸ್ಯರಾದ ಯಡಿಯೂರಪ್ಪನವರ ವಿಚಾರದಲ್ಲಿ ಕಳೆದ ಒಂದು ವಾರದ ಹಿಂದೆ ಹೇಳಿದ್ದೆ. ಮಾರ್ಚ್ 31 ರೊಳಗೆ ಇನ್ ಸರ್ವೀಸ್ ಪಿ.ಜಿ. ಮಾಡಿಕೊಂಡು ಬಂದ ವೈದ್ಯರುಗಳು ಬರುತ್ತಾ ಇದ್ದಾರೆ. ಏಪ್ರಿಲ್ ಮೊದಲ ವಾರದಲ್ಲಿ ಕನಿಷ್ಠ ತುಂಬಾ ತುರ್ತು ತೊಂದರೆ ಎಲ್ಲಿ ಇದೆ, ಆ ಜಾಗಕ್ಕೆ ನಾವು ಭರ್ತಿ ಮಾಡತಕ್ಕ ಕೆಲಸವನ್ನು ಮಾಡುತ್ತೇವೆ. ನಂತರ, ನಾವು ಹೊಸದಾಗಿ ನೇಮಕ ಮಾಡತಕ್ಕಂಥಾದ್ದು, ಕಾಂಟ್ರಾಕ್ಟ್ ಬೇಸಿಸ್ ಮೇಲೆ ತೆಗೆದುಕೊಳ್ಳತಕ್ಕಂಥಾದ್ದು ಮಾಡುತ್ತೇವೆ. ಈಗಾಗಲೇ ಕಾಂಟ್ರಾಕ್ಟ್ ಬೆಸಿಸ್ ಮೇಲೆ ತೆಗೆದುಕೊಳ್ಳತಕ್ಕ ಡಾಕ್ಟರುಗಳಿಗೆ ಸಂಬಳವನ್ನು ಹೆಚ್ಚು ಮಾಡಿದ್ದೇವೆ. ರೆಗ್ಯುಲರ್ ಡಾಕ್ಟರುಗಳು ಮತ್ತು ಸ್ಪೆಷಲಿಸ್ಟ್‌ಗಳಿಗೂ ಸಹ ಹೆಚ್ಚು

ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಈಗಾಗಲೇ ಹಣಕಾಸಿನ ಇಲಾಖೆಯವರೊಂದಿಗೆ ಮಾತನಾಡುತ್ತಾ ಇದ್ದೇವೆ. ಇದನ್ನೂ ನಾವು ಪ್ರಯತ್ನ ಮಾಡಿ ಎಲ್ಲಾ ಕಡೆ ವೈದ್ಯರುಗಳು ಮತ್ತು ಸಿಬ್ಬಂದಿಯನ್ನು ಕೊಡತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂಬ ಬಗ್ಗೆ ನಮ್ಮ ಇಲಾಖೆ ಬದ್ಧವಾಗಿದೆ. ಇದರ ಬಗ್ಗೆ ಬಹುಶಃ ಅವರೇನು ಹೇಳಿದರೋ ಆ ರೀತಿ ಏಪ್ರಿಲ್‌ನಿಂದಲೆ ಸೀರಿಯಸ್ಸಾಗಿ ಕಾರ್ಯೋನ್ಮುಖರಾಗುತ್ತೇವೆ.

ಶ್ರೀ ಆರ್. ಧ್ರುವನಾರಾಯಣ: ವೈದ್ಯರುಗಳೂ ಕಡ್ಡಾಯವಾಗಿ ರಾತ್ರಿ ಅಲ್ಲಿಯೇ ತಂಗುವ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಲಿಲ್ಲ. ಡಾ. ನಂಜುಂಡಪ್ಪ ಆಯೋಗದ ವರದಿ ಪ್ರಕಾರ ಚಾಮರಾಜನಗರದಲ್ಲಿರತಕ್ಕ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಬೇಕೆಂಬ ಹಿನ್ನೆಲೆಯಲ್ಲಿ, ನನ್ನ ಕ್ಷೇತ್ರದ ಸಂತೇಮರಳ್ಳಿ ಮತ್ತು ಉಮ್ಮತ್ತೂರು ಪಿ.ಹೆಚ್.ಸಿ. ಗಳನ್ನು ಮೆಲ್ದರ್ಜೆಗೇರಿಸಬೇಕೆಂದು ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ.ವಿ. ಉಮಾಪತಿ: ತಾವು ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೀರಿ, ವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವುದಕ್ಕೆ, ಆದರೆ, ಅವರು ಬಹಳಷ್ಟು ವಿಳಂಬ ಮಾಡುತ್ತಿದ್ದಾರೆ. ಇದರಿಂದ, ಜನಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ, ತಕ್ಷಣವೇ ಸೂಕ್ತ ನಿರ್ದೇಶನವನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟು, ಎಲ್ಲೆಲ್ಲಿ ಅವಶ್ಯಕತೆ ಇದೆ, ಅಲ್ಲಿ ವೈದ್ಯರುಗಳನ್ನು ಭರ್ತಿ ಮಾಡುವುದಕ್ಕೆ ತಾವು ನಿರ್ದೇಶನ ಕೊಡಬೇಕೆಂದು ನಮ್ಮ ವಿನಂತಿ.

ಶ್ರೀ ಎನ್. ಚೆಲುವರಾಯಸ್ವಾಮಿ: ಅವರ ಕ್ಷೇತ್ರದ ಪಿ.ಹೆಚ್.ಸಿ.ಯನ್ನು ಅಪ್‌ಗ್ರೇಡ್ ಕೇಳಿದ್ದಾರೆ, ಅದನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ವೈದ್ಯರುಗಳು ಕೇಂದ್ರ ಸ್ಥಳದಲ್ಲಿ ಇರಬೇಕೆಂಬುದಕ್ಕೆ ಕಟ್ಟುನಿಟ್ಟಿನ ಆದೇಶ ಇದೆ. ಎಲ್ಲಿ ಇರುವುದಿಲ್ಲವೆಂದು ಅವರು ಹೇಳಿದ್ದಾರೆ. ಅದರ ಬಗ್ಗೆ ನಾನು ಮಾಹಿತಿ ತರಿಸಿ ಕೊಂಡು, ಮುಂದೆ ಅವರು ಅಲ್ಲಿಯೆ ಇರುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ, ಜಿಲ್ಲಾ ಆಸ್ಪತ್ರೆ ಮತ್ತು ತಾಲ್ಲೂಕು ಆಸ್ಪತ್ರೆ ಮತ್ತು ಪಿ.ಹೆಚ್.ಸಿ.ಗಳಿಗೆ ಸ್ಪೆಷಲಿಸ್ಟ್ ಗಳನ್ನು ಕಾಂಟ್ರಾಕ್ಟ್ ಬೇಸಿನ್ ಮೇಲೆ ತೆಗೆದುಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿರುವುದರಿಂದ ಏಪ್ರಿಲ್ ಮೊದಲ ವಾರ ಅಥವಾ ಎರಡನೇ ವಾರದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಕಾಲ್ ಮಾಡಿ ತೆಗೆದುಕೊಳ್ಳುವುದಕ್ಕೆ ತಕ್ಷಣ ನಾಳೆಯೇ ಸುತ್ತೋಲೆಯನ್ನು ಕಳುಹಿಸಿಕೊಡುತ್ತೇನೆ.